6. Mandya Andolana (10.8.2011)

Colonial consciousness has not disappeared. We don't have independence.

ಆ. ೧೦,೨೦೧೧ ೧ನೇ ಕ್ರಾಸ್, ಎಸ್.ಬಿ.ಎಂ. (ಕೃಷಿ ಅಭಿವೃದ್ಧಿ ಶಾಖೆ ) ಎದುರು ಬಂದೀಗೌಡ ಬಡಾವಣೆ, ಮಂಡ್ಯ

# 'ವಸಾಹತುಶಾಹಿ ಪ್ರಜ್ಞೆ ತೊಲಗಿಲ್ಲ, ನಮಗೆ ಸ್ವರಾಜ್ಯ ಸಿಕ್ಕಿಲ್ಲ'



ಮಂಡ್ಯ,ಆ.೯–ಬ್ರಿಟಿಷರು ಭಾರತವನ್ನು ಬಿಟ್ಟು ಹೋಗಿದ್ದರೂ ಭಾರತೀಯರ ಮನಸ್ಸಿನಿಂದ ವಸಾಹಾತುಶಾಹಿ ಪ್ರಜ್ಞೆ ತೊಲಗಿಲ್ಲ. ಇದು ನಮ್ಮ ಮನಸ್ಸಿನಿಂದ ತೊಲಗುವ ತನಕ ಸ್ವರಾಜ್ಯ ಬಂದಿದೆ ಎಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಪ್ರೊ.ಬಾಲಗಂಗಾಧರ್ ಹೇಳಿದರು.

ಶಿವಮೊಗ್ಗ ಕುವೆಂಪು ವಿಶ್ವವಿದ್ಯಾನಿಲಯದ ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರ, ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಕಲಾತಪಸ್ವಿ ಟ್ರಸ್ಟ್ ಸಂಯುಕ್ತವಾಗಿ ನಗರದ ಗಾಂಧಿ ಭವನದಲ್ಲಿ ಏರ್ಪಡಿಸಿದ್ದ 'ಸಂಸ್ಕೃತಿ ಚಿಂತನ ಸಂವಾದ' ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡುತ್ತಿದ್ದರು.

ಭಾರತದಲ್ಲಿ ಬ್ರಿಟೀಷರು ಆಡಳಿತ ನಡೆಸಿದ್ದು ಸಹಜ, ಇದಕ್ಕೆ ಬಹುಮುಖ್ಯವಾಗಿ ನಮ್ಮನ್ನು ನಾವು ಅರಿಯದೆ, ಬ್ರಿಟಿಷರಿಂದ ಆಳಿಸಿಕೊಂಡ ನಮ್ಮ ದೌರ್ಬಲ್ಯವೇ ಕಾರಣವಾಗಿದೆ.

ಬ್ರಿಟಿಷರಿಂದ ಭೌತಿಕವಾಗಿ ನಮಗೆ ಸ್ವಾತಂತ್ರ್ಯ ಬಂದಿದೆ ಎಂಬುದು ನಿಜವಾದರೂ ಭಾರತೀಯರಿಗೆ ಮಾನಸಿಕ ಸ್ವರಾಜ್ಯ ಇನ್ನೂ ಬಂದಿಲ್ಲ. ಇದಕ್ಕೆ ಕಾರಣ ಎಂದರೆ ಭಾರತೀಯರಾದ ನಮಗೆ ನಮ್ಮ ಅನುಭವಗಳು ದಕ್ಕುತ್ತಿಲ್ಲ.

ಎಲ್ಲ ಮತದಾರರು ತಮ್ಮ ಧರ್ಮವೇ ಶ್ರೇಷ್ಠ, ಸತ್ಯ ಎನ್ನುತ್ತಾರೆ. ಇದರ ಅರ್ಥ ಉಳಿದ ಎಲ್ಲಾ ಧರ್ಮಗಳು ಸುಳ್ಳು ಎಂದಾಗುತ್ತದೆ. 'ಬೈಬಲ್‌ನ್ನು ಸತ್ಯವೇದ' ಎನ್ನುತ್ತಾರೆ. ಉಳಿದ ಎಲ್ಲಾ ವೇದಗಳು ಅಸತ್ಯ ಎಂದಾಯಿತು. ನಮಗೆ ಮತ, ಧರ್ಮ, ಜಾತಿಗಳ ವ್ಯತ್ಯಾಸವೇ ಗೊತ್ತಿಲ್ಲ. 'ಹಿಂದೂವೋ ಎಂಬುದು ಧರ್ಮವೋ, ಜಾತಿಯೋ, ಮತವೋ ನಮಗೆ ಗೊತ್ತಿಲ್ಲ' ಎಂದ ಮೇಲೆ ಸೆಕ್ಯೂಲರಿಜಂ ಎಂಬುದರ ಅರ್ಥವೂ ಅರ್ಥವಾಗುವುದಿಲ್ಲ. ಮುಖ್ಯವಾಗಿ ನಮ್ಮನ್ನು ನಾವು ನೋಡಿಕೊಂಡು ಅರ್ಥೈಸಿಕೊಂಡಾಗ, ನಮಗೆ ಸುತ್ತ ಏನು ನಡೆಯುತ್ತದೆ ಎಂಬುದು ಅರ್ಥವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಮಾಂಡವ್ಯ ಶಿಕ್ಷಣ ಸಂಸ್ಥೆಯ ಮೀರಾಶಿವಲಿಂಗಯ್ಯ, ಅರ್ಜುನಪುರಿ ಅಪ್ಪಾಜಿಗೌಡ, ನಾಗರೇವಕ್ಕ, ಎಂ.ಎಸ್.ಕೆಂಪೇಗೌಡ, ಶ್ರೀಪಾದು, ಡೇವಿಡ್, ಡಾ.ಲೀಲಾಅಪ್ಪಾಜಿ ಮುಂತಾದವರು ಸಂವಾದದಲ್ಲಿ ಪಾಲ್ಗೊಂಡರು.

ಸಂಸ್ಕೃತ ಗೊತ್ತಿರುವವರಿಗೆ ಸಂಸ್ಕೃತಿ ಗೊತ್ತಿರುತ್ತದೆ ಎಂಬುದು ಸುಳ್ಳು. ನಮ್ಮ ಅನುಭವದ ಮೇಲೆ ಕಣ್ಣು ಬಿಟ್ಟು ನೋಡಬೇಕಾಗಿದೆ. ವೇದಾಂತ, ಆತ್ಮಜ್ಞಾನ, ದೇವರು, ಬ್ರಹ್ಮ ಮುಂತಾದ ವಿಚಾರಗಳನ್ನು ಶಂಕರಾಚಾರ್ಯರ ಭಾಷೆಯಲ್ಲಿ ಹೇಳಿದರೆ ಪ್ರಯೋಜನವಿಲ್ಲ. ಇಂದಿನವರಿಗೆ, ಇಂದಿನ ಭಾಷೆಯಲ್ಲಿಯೇ ಹೇಳಿದರೆ ಅರ್ಥಮಾಡಿಕೊಳ್ಳುವ ಸಾಧ್ಯತೆ ಇದೆ ಎಂದು ಬಾಲಗಂಗಾಧರ ಅಭಿಪ್ರಾಯ ಪಟ್ಟರು.

ಪ್ರೊ. ರಾಜರಾಮ್ ಹೆಗಡೆ ಪ್ರಾಸ್ತಾವಿಕ ನುಡಿ ನುಡಿದು ಭಾರತ ಸಂಸ್ಕೃತಿಯನ್ನು ಅಂತರಶಿಸ್ತೀಯವಾಗಿ ಆಧುನಿಕ ಪರಿಭಾಷೆಯಲ್ಲಿ ಸಾಮಾನ್ಯ ಜನರಿಗೂ ಅರ್ಥವಾಗುವಂತೆ ತಿಳಿಸಬೇಕಾದ ಅಗತ್ಯವಿದೆ ಎಂದರು.

ಕಾರ್ಯಕ್ರಮವನ್ನು ಮಾಜಿ ಶಾಸಕ ಹೊನ್ನಪ್ಪ ಜ್ಯೋತಿ ಬೆಳಗಿ ಉದ್ಘಾಟಿಸಿದರು. ಜಿ.ಪಂ. ಆರೋಗ್ಯ ಹಾಗೂ ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷ ಹೆಚ್.ಮಾದಪ್ಪ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಯುವಜನ ಸೇವಾ ಇಲಾಖೆ ನಿರ್ದೇಶಕಿ ಡಾ. ಮಂಜುಳಹುಲ್ಲಹಳ್ಳಿ ಸ್ವಾಗತಿಸಿ, ಕು.ರಚನಾ ವಂದಿಸಿ, ಕು.ಪವಿತ್ರ ನಿರೂಪಣೆ ಮಾಡಿದರು.